**ಪಾಠ-11** **ಸೆಪ್ಟೆಂಬರ್ 5-11**

# ಯೇಸುವಿನ ಕಥೆಯನ್ನು ಹಂಚಿಕೊಳ್ಳುವುದು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಎಫೆಸ 2:1-10; 1 ಯೋಹಾನ 4:7-11; ಮಾರ್ಕ 5:1-20; ಇಬ್ರಿಯ 10:19-22; ಗಲಾತ್ಯ 2:20; 1 ಕೊರಿಂಥ 1:30.

**ಸ್ಮರಣವಾಕ್ಯ : "ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ, ಮತ್ತು ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಡುವುದನ್ನು ಮುಂದುವರೆಸಬಹುದು" (1 ಯೊಹಾನ 5:13).**

ಹಿಂದಿನ ಪಾಠದಲ್ಲಿ ಹೇಳಿದಂತೆ, ಬದಲಾವಣೆ ಹೊಂದಿದ ಜೀವನಕ್ಕಿಂತ ಬೇರ್ಯಾವುದು ಸುವಾರ್ತೆಯ ಶಕ್ತಿಯ ಬಗ್ಗೆ ಹೆಚ್ಚು ವಾಕ್ಚಾತುರ್ಯದಿಂದ ವಾದಿಸುವುದಿಲ್ಲ. ಜನರು ನಿಮ್ಮ ದೈವಶಾಸ್ತ್ರದೊಂದಿಗೆ ವಾದಿಸಬಹುದು. ಅವರು ನಿಮ್ಮ ಕುರಿತು ವಿಚಾರ ಮಾಡಬಹುದು. ಅವರು ನಿಮಗಿರುವ ಧರ್ಮಗ್ರಂಥಗಳ ತಿಳುವಳಿಕೆಯನ್ನು ಪ್ರಶ್ನಿಸಬಹುದು, ಆದರೆ ನಿಮಗೆ ಯೇಸು ಎಂದರೆ ಏನು ಮತ್ತು ನಿಮ್ಮ ಜೀವನದಲ್ಲಿ ಏನು ಮಾಡಿದ್ದಾನೆ ಎಂಬುದರ ಕುರಿತು ನಿಮ್ಮ ವೈಯಕ್ತಿಕ ಸಾಕ್ಷಿಯನ್ನು ವಿರಳವಾಗಿ ಪ್ರಶ್ನಿಸುತ್ತಾರೆ.

ಸಾಕ್ಷಿಯೆಂದರೆ ಯೇಸುವಿನ ಬಗ್ಗೆ ನಮಗೆ ಗೊತ್ತಿರುವುದನ್ನು ಹಂಚಿಕೊಳ್ಳುವುದು ಆತನು ನಮಗೆ ಏನಾಗಿದ್ದಾನೆ ಮತ್ತು ನಮಗಾಗಿ ಏನು ಮಾಡಿದ್ದಾನೆ ಎಂಬುದನ್ನು, ಅದು ಇತರರಿಗೆ ತಿಳಿಸುತ್ತದೆ. ನಮ್ಮ ಸಾಕ್ಷಿಯ, ನಾವು ಏನನ್ನು ನಂಬುತ್ತೇವೆ ಅದು ಮಾತ್ರ ಸರಿ ಮತ್ತು ಇತರರು ನಂಬುವುದು ಸುಳ್ಳು ಎಂದು ಸಾಬೀತುಪಡಿಸಲು ಪ್ರಯತ್ನಿಸುತ್ತಿದ್ದು, ನಾವು ತೀವ್ರವಿರೋಧವನ್ನು ಎದುರಿಸಬೇಕಾಗುತ್ತದೆ. ಯೇಸುವಿನ ಕುರಿತ ನಮ್ಮ ಸಾಕ್ಷಿಯು ಆತನ ಕೃಪೆಯಿಂದ ಪರಿವರ್ತನೆಗೊಂಡು ಆತನ ಪ್ರೀತಿಯಿಂದ ಮರುಳುಗೊಂಡು ಮತ್ತು ಆತನ ಕೃಪೆಯಿಂದ ಪರಿವರ್ತನೆಗೊಂಡು ಮತ್ತು ಆತನ ಸತ್ಯದಲ್ಲಿ ಆಶ್ಚರ್ಯಚಕಿತಗೊಂಡ ಹೃದಯದಿಂದ ಬಂದಿದ್ದರೆ, ನಾವು ನಂಬುವ ಸತ್ಯವು ನಮ್ಮ ಜೀವನದ ಮೇಲೆ ಹೇಗೆ ಪರಿಣಾಮ ಬೀರಿದೆ ಎಂಬುದು ಇತರರ ಮೇಲೆ ಆಳುವಾಗಿ ಪರಿಣಾಮ ಬೀರುತ್ತದೆ. ಬದಲಾದ ಜೀವನದ ಸನ್ನಿವೇಶದಲ್ಲಿ ಪ್ರಸ್ತುತಪಡಿಸಲಾದ ಸತ್ಯವು ಎಲ್ಲಾ ವ್ಯತ್ಯಾಸಗಳನ್ನು ಉಂಟುಮಾಡುತ್ತದೆ.

ಕ್ರಿಸ್ತನು ಪ್ರತಿಯೊಂದು ಸಿದ್ಧಾಂತಗಳ ಕೇಂದ್ರವಾಗಿದ್ದಾಗ ಮತ್ತು ಪ್ರತಿ ಸತ್ಯವೇದದ ಬೋಧನೆಯು ಆತನ ಗುಣವನ್ನು ಪ್ರತಿಬಿಂಬಿಸಿದಾಗ, ನಾವು ಯಾರ ಜೊತೆಗೆ ಸತ್ಯವೇದವನ್ನು ಹಂಚಿಕೊಳ್ಳುತ್ತಿದ್ದೇವೆಯೋ ಅವರು ಆತನ ಮಾತುಗಳನ್ನು ಸ್ವೀಕರಿಸುವ ಸಾಧ್ಯತೆ ಹೆಚ್ಚು.

**ಭಾನುವಾರ** **ಸೆಪ್ಟೆಂಬರ್ 6**

## ಯೇಸು : ನಮ್ಮ ಸಾಕ್ಷಿಯ ಆಧಾರ

ಕ್ರೈಸ್ತರಾದ ನಮ್ಮೆಲ್ಲರಿಗೂ ಹೇಳುವುದಕ್ಕೆ ಒಂದು ವೈಯಕ್ತಿಕ ಕಥೆ ಇದೆ, ಯೇಸು ನಮ್ಮ ಜೀವನಗಳನ್ನು ಹೇಗೆ ಬದಲಾಯಿಸಿದನು ಮತ್ತು ಆತನು ನಮಗೋಸ್ಕರ ಏನು ಮಾಡಿದನು ಎಂಬುದರ ಬಗ್ಗೆ ಒಂದು ಕಥೆ ಇದೆ.

ಎಫೆಸ 2:1–10 ಓದಿರಿ. ಕ್ರಿಸ್ತನನ್ನು ತಿಳುಕೊಳ್ಳುವ ಮೊದಲು ನಾವು ಏನಾಗಿದ್ದೇವು? ನಾವು ಕ್ರಿಸ್ತನನ್ನು ಅಂಗೀಕರಿಸಿಕೊಂಡಾಗಿನಿಂದ ಏನಾಗಿದ್ದೇವೆ?

ಎ. ನಾವು ಕ್ರಿಸ್ತನನ್ನು ತಿಳಿಯುವ ಮೊದಲು (ಎಫೆಸ 2:1–3).

ಬಿ. ನಾವು ಕ್ರಿಸ್ತನನ್ನು ತಿಳಿದ ನಂತರ (ಎಫೆಸ 2:4–10).

ಎಂತಹ ಅದ್ಭುತ ಬದಲಾವಣೆ! ನಾವು ಕ್ರಿಸ್ತನನ್ನು ತಿಳಿಯುವ ಮೊದಲು, ನಮ್ಮ ಅಪರಾಧ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದೆವು", "ಇಹಲೋಕಾಚಾರಕ್ಕೆ ಅನುಸಾರವಾಗಿ ನಡೆದುಕೊಂಡೆವು", "ಶರೀರದ ಇಚ್ಛೆಗಳನ್ನು ನೆರವೇರಿಸಿದೆವು", ಮತ್ತು ಸ್ವಭಾವ ಸಿದ್ಧವಾಗಿ ಕೋಪಕ್ಕೆ ಗುರಿಯಾದ ಮಕ್ಕಳಾಗಿದ್ದೇವೆ". ಸರಳವಾಗಿ ಹೇಳುವುದಾದರೆ, ನಾವು ಕ್ರಿಸ್ತನನ್ನು ತಿಳಿಯುವ ಮೊದಲು, ನಾವು ಕಳೆದುಹೋದ ಪರಿಸ್ಥಿತಿಯಲ್ಲಿ, ಜೀವನದಲ್ಲಿ ಗುರಿಯಿಲ್ಲದೆ ಅಲೆದಾಡಿದ್ದೇವೆ.

ಸಂತೋಷವೆಂದು ಕಾಣಿಸಿಕೊಂಡದ್ದನ್ನು ನಾವು ಅನುಭವಿಸಿರಬಹುದು, ಆದರೆ ನಮ್ಮ ಜೀವನದಲ್ಲಿ ಆತ್ಮದ ಕಳವಳ ಮತ್ತು ಕೈಗೂಡದ ಉದ್ದೇಶವಿತ್ತು. ಕ್ರಿಸ್ತನ ಬಳಿಗೆ ಬರುವುದು ಮತ್ತು ಆತನ ಪ್ರೀತಿಯನ್ನು ಅನುಭವಿಸುವುದು ಎಲ್ಲಾ ವ್ಯತ್ಯಾಸವನ್ನುಂಟು ಮಾಡಿತು ಈಗ ನಾವು ಕ್ರಿಸ್ತನಲ್ಲಿ ನಿಜವಾಗಿಯೂ "ಜೀವದಿಂದಿದ್ದೇವೆ". ನಮ್ಮ ಕಡೆಗೆ ಇರುವ ಆತನ ಕೃಪೆಯ ಮಿತಿಮೀರಿದ ಐಶ್ವರ್ಯ ಮತ್ತು ಆತನ "ಶ್ರೀಮಂತ... ಕರುಣೆಯ" ಮೂಲಕ, ನಾವು ರಕ್ಷಣೆಯ ಉಡುಗೊರೆಯನ್ನು ಪಡೆದುಕೊಂಡಿದ್ದೇವೆ. "ಕ್ರಿಸ್ತಯೇಸುವಿನಲ್ಲಿ ಪರಲೋಕದ ಸ್ಥಳಗಳಲ್ಲಿ ಒಟ್ಟಿಗೆ ಕುಳಿತುಕೊಳ್ಳುವುದಕ್ಕಾಗಿ" ಆತನು ನಮ್ಮನ್ನು ಬೆಳೆಸಿದ್ದಾನೆ, ಆತನು ಮುಂಬರುವ ಯುಗಗಳಲ್ಲಿ ಕ್ರಿಸ್ತಯೇಸುವಿನಲ್ಲಿ ಆತನ ಕೃಪೆಯ ಐಶ್ವರ್ಯಕ್ಕೆ ತಕ್ಕಂತೆ ಆತನ ಕರುಣೆಯನ್ನು ನಮ್ಮ ಕಡೆಗೆ ತೋರಿಸಬಹುದು". ಕ್ರಿಸ್ತನಲ್ಲಿ ಜೀವನವು ಹೊಸ ಅರ್ಥವನ್ನು ಮತ್ತು ಹೊಸ ಉದ್ದೇಶವನ್ನು ಪಡೆದುಕೊಂಡಿದೆ. "ಆತನಲ್ಲಿ ಜೀವವಿತ್ತು, ಆ ಜೀವನವು ಮನುಷ್ಯರಿಗೆ ಬೆಳಕಾಗಿತ್ತು" (ಯೋಹಾನ 1:4) ಎಂದು ಯೋಹಾನನು ಘೋಷಿಸಿದನು.

ಎಫೆಸ 2:10 ಓದಿರಿ. ಕ್ರೈಸ್ತರ ನಂಬಿಕೆಗೆ ಒಳ್ಳೆಯ ಕ್ರಿಯೆಗಳು ಹೇಗೆ ಕೇಂದ್ರವಾಗಿದೆ ಎಂಬುದರ ಕುರಿತು ಈ ವಚನವು ನಮಗೆ ಏನು ಹೇಳುತ್ತದೆ? "ಧರ್ಮಪ್ರಮಾಣ ಸಂಬಂಧವಾದ ಕರ್ಮಗಳಿಲ್ಲದೆ" ನಂಬಿಕೆಯಿಂದಲೇ ರಕ್ಷಣೆ (ರೋಮಾ 3:28) ಎಂಬ ಸನ್ನಿವೇಶದಲ್ಲಿ ನಾವು ಈ ಕಲ್ಪನೆಯನ್ನು ಹೇಗೆ ಅರ್ಥಮಾಡಿಕೊಳ್ಳುತ್ತೇವೆ?

ಕ್ರಿಸ್ತನ ನಿಮಿತ್ತವಾಗಿ ನಿಮ್ಮ ಜೀವನವು ಬದಲಾವಣೆ ಹೊಂದಿದೆ, ಆ ಬದಲಾವಣೆಯು ಬೇರೊಬ್ಬರನ್ನು ಯೇಸು ಜ್ಞಾನಕ್ಕೆ ತರಲು ಹೇಗೆ ಸಹಾಯ ಮಾಡುತ್ತದೆ?

**ಸೋಮವಾರ** **ಸೆಪ್ಟೆಂಬರ್ 7**

## ವೈಯಕ್ತಿಕ ಸಾಕ್ಷಿಯ ಪರಿವರ್ತನೆಯ ಶಕ್ತಿ

ಯೋಹಾನ ಮತ್ತು ಜೆಬೆದಾಯನ ಮಗನಾದ ಯಾಕೋಬನನ್ನು "ಗುಡುಗಿನ ಮರಿಗಳು" ಎಂದು ಕರೆಯಲಾಗುತ್ತಿತ್ತು (ಮಾರ್ಕ 3:17). ವಾಸ್ತವವಾಗಿ, ಯೇಸು ಅವರಿಗೆ ಅಡ್ಡಹೆಸರನ್ನು ಇಟ್ಟನು. ಯೇಸು ತನ್ನ ಶಿಷ್ಯರೊಂದಿಗೆ ಸಮಾರ್ಯದ ಮೂಲಕ ಹಾದುಹೋಗುವಾಗ ಯೋಹಾನನ ಕೋಪಸ್ವಭಾವದ ಒಂದು ಉದಾಹರಣೆ ಅಲ್ಲಿ ಜರುಗಿತು. ಆ ರಾತ್ರಿ ಅಲ್ಲಿ ಉಳಿದುಕೊಳ್ಳಲು ಒಂದು ವಸತಿ ಸ್ಥಳವನ್ನು ಹುಡುಕಲು ಪ್ರಯತ್ನಿಸುತ್ತಿದ್ದಾಗ, ಯೆಹೂದಿ ಮತ್ತು ಸಮಾರ್ಯದವರ ನಡುವೆ ಇದ್ದ ಪಕ್ಷಪಾತದ ಕಾರಣದಿಂದಾಗಿ ಅವರು ವಿರೋಧತೆಯನ್ನು ಎದುರಿಸಿದರು. ಅವರು ಕೀಳರಿಮೆಯ ವಸತಿಯನ್ನು ಸಹ ನಿರಾಕರಿಸಿದರು.

ಯಾಕೋಬ ಮತ್ತು ಯೋಹಾನನು ಸಮಸ್ಯೆಗೆ ಪರಿಹಾರ ತಮ್ಮ ಬಳಿ ಇದೆ ಎಂದು ಭಾವಿಸಿದರು. "ಆತನ ಶಿಷ್ಯರಾದ ಯಾಕೋಬ ಯೋಹಾನರು ಇದನ್ನು ಕಂಡು– ಸ್ವಾಮೀ ಎಲೀಯನು ಮಾಡದಂತೆ ಆಕಾಶದಿಂದ ಬೆಂಕಿ ಬಿದ್ದು ಇವರನ್ನು ನಾಶಮಾಡಲಿ ಎಂದು ನಾವು ಹೇಳುವುದಕ್ಕೆ ನಿನಗೆ ಮನಸ್ಸುಂಟೋ? ಎಂದು ಅವರು ಕೇಳಿದರು" (ವಾಕ 9:54). ಯೇಸು ತಿರುಗಿಕೊಂಡು ಆ ಸಹೋದರರನ್ನು ಗದರಿಸಿದನು. ಆಗ ಅವರೆಲ್ಲರು ಸದ್ದಿಲ್ಲದೆ ಹಳ್ಳಿಯನ್ನು ಬಿಟ್ಟು ಹೋದರು. ಯೇಸುವಿನ ಮಾರ್ಗವು ಪ್ರೀತಿಯ ಮಾರ್ಗವಾಗಿದೆ, ಆದರೆ ಜಗಳಗಂಟ ಸ್ವಭಾವವಲ್ಲ.

ಯೇಸುವಿನ ಪ್ರೀತಿಯ ಪ್ರಸನ್ನತೆಯಲ್ಲಿ, ಯೋಹಾನನ ದುಡುಕು ಮತ್ತು ಕೋಪವು ಪ್ರೀತಿಯುಳ್ಳ ದಯೆಯುಳ್ಳ ಮತ್ತು ಮೃದುವಾದ ಸಹಾನುಭೂತಿ ಮನೋಭಾವಕ್ಕೆ ಪರಿವರ್ತನೆಗೊಂಡಿತು. ಯೋಹಾನನು ಬರೆದ ಮೊದಲ ಪತ್ರಿಕೆಯಲ್ಲಿ, ಪ್ರೀತಿ ಎಂಬ ಪದವು ಸುಮಾರು ನಲವತ್ತು ಬಾರಿ ಕಂಡುಬರುತ್ತದೆ; ಅದರ ವಿವಿಧ ರೂಪಗಳಲ್ಲಿ, ಅದು 50 ಬಾರಿ ಕಂಡುಬರುತ್ತದೆ.

1 ಯೋಹಾನ 1:1–4; 1 ಯೋಹಾನ 3:1; 1 ಯೋಹಾನ 4:7–11; ಮತ್ತು 1 ಯೋಹಾನ 5:1–5 ಓದಿರಿ. ಯೋಹಾನನ ಸಾಕ್ಷಿ ಮತ್ತು ಯೇಸುವಿನೊಂದಿಗಿನ ತನ್ನ ಸಂವಹನದ ಕಾರಣದಿಂದಾಗಿ ಅವನ ಜೀವಿತದಲ್ಲಿ ಸಂಭವಿಸಿದ ಬದಲಾವಣೆಯ ಬಗ್ಗೆ ಈ ವಾಕ್ಯಭಾಗಗಳು ಏನು ಹೇಳುತ್ತವೆ?

ವಿಶ್ವದ ಶಾಶ್ವತ ತತ್ವವಿದೆ. ಎಲೆನ್ ಜಿ ವೈಟ್‌ರವರು ಈ ತತ್ವಗಳನ್ನು ಈ ಮಾತುಗಳಲ್ಲಿ ಚೆನ್ನಾಗಿ ಹೇಳುತ್ತಾರೆ: "ಒತ್ತಾಯದ ಅಭ್ಯಾಸವು ದೇವರ ಸರ್ಕಾರದ ತತ್ವಗಳಿಗೆ ವಿರುದ್ಧವಾಗಿದೆ; ಆತನು ಪ್ರೀತಿಯ ಸೇವೆಯನ್ನು ಮಾತ್ರ ಇಚ್ಛಿಸುತ್ತಾನೆ; ಮತ್ತು ಪ್ರೀತಿಯನ್ನು ಆಜ್ಞಾಪಿಸಬಾರದು; ಅದನ್ನು ಒತ್ತಾಯ ಅಥವಾ ಅಧಿಕಾರದಿಂದ ಜಯಿಸಲು ಸಾಧ್ಯವಿಲ್ಲ. ಪ್ರೀತಿಯಿಂದ ಮಾತ್ರ ಪ್ರೀತಿಯನ್ನು ಎಬ್ಬಿಸಲು ಸಾಧ್ಯ"– ದಿ ಡಿಸೈರ್ ಆಫ್ ಏಜಸ್, ಪುಟ 22.

ನಾವು ಕ್ರಿಸ್ತನಿಗೆ ಬದ್ಧರಾದಾಗ, ಆತನ ಪ್ರೀತಿಯು ನಮ್ಮ ಮೂಲಕ ಇತರರಿಗೆ ಹೊಳೆಯುತ್ತದೆ. ಬದಲಾದ ಜೀವನವೇ ಕ್ರೈಸ್ತಧರ್ಮದ ಶ್ರೇಷ್ಠ ಸಾಕ್ಷಿಯಾಗಿದೆ. ನಾವು ಎಂದಿಗೂ ತಪ್ಪು ಮಾಡುವುದಿಲ್ಲ ಎಂಬುದು ಇದರ ಅರ್ಥವಲ್ಲ ಮತ್ತು ನಾವು ಪ್ರೀತಿ ಮತ್ತು ಕೃಪೆಯ ಕಾಲುವೆಗಳಾಗಿರಬೇಕಾಗಿತ್ತು. ಆದರೆ ಕೆಲವು ಸಮಯಗಳಲ್ಲಿ ಸಾಧ್ಯವಾಗುವುದಿಲ್ಲ. ಆದರೆ ಇದರರ್ಥ, ಕ್ರಿಸ್ತನ ಪ್ರೀತಿಯು ನಮ್ಮ ಜೀವನದಿಂದ ಹರಿದರೆ, ನಾವು ನಮ್ಮ ಸುತ್ತಮುತ್ತಲಿರುವ ಜನರಿಗೆ ಆಶೀರ್ವಾದವಾಗುತ್ತೇವೆ.

ನೀವು ಕ್ರಿಸ್ತನ ಪ್ರೀತಿಯನ್ನು ಇತರರಿಗೆ ಎಷ್ಟು ಚೆನ್ನಾಗಿ ಪ್ರತಿಬಿಂಬಿಸುವಿರಿ? ನಿಮ್ಮ ಉತ್ತರದ ಪರಿಣಾಮಗಳ ಬಗ್ಗೆ ಯೋಚಿಸಿರಿ.

ಮಂಗಳವಾರ ಸೆಪ್ಟೆಂಬರ್ 8

## ಯೇಸುವಿನ ಕಥೆಯನ್ನು ಹೇಳುವುದು

ಯೇಸು ಕಳುಹಿಸಿದ ಮೊದಲ ಮಿಷನರಿಗಳು ಯಾರು? ಅವರು ಶಿಷ್ಯರುಗಳ ನಡುವೆ ಇರಲಿಲ್ಲ. ಅವರು ಆತನ ದೀರ್ಘಕಾಲದ ಅನುಯಾಯಿಗಳ ನಡುವೆಯೂ ಇರಲಿಲ್ಲ. ಯೇಸು ಕಳುಹಿಸಿದ ಮೊದಲ ಮಿಷನರಿಗಳು ಹುಚ್ಚು ಮನುಷ್ಯರು, ಕೆಲವು ಗಂಟೆಗಳ ಮೊದಲು ಗ್ರಾಮಾಂತರವನ್ನು ಭಯಭೀತಿಗೊಳಿಸಿದ ಮತ್ತು ನೆರೆಯ ಗ್ರಾಮಸ್ಥರ ಹೃದಯದಲ್ಲಿ ಭಯವನ್ನುಂಟು ಮಾಡಿದ ದೆವ್ವ ಹಿಡಿದ ವ್ಯಕ್ತಿಗಳಾಗಿದ್ದರು.

ಅಲೌಕಿಕ ದೆವ್ವದ ಶಕ್ತಿಯೊಂದಿಗೆ, ಈ ದೆವ್ವ ಹಿಡಿದ ವ್ಯಕ್ತಿಗಳಲ್ಲಿ ಒಬ್ಬನು, ತಾನು ಬಂಧಿತನಾಗಿದ್ದ ಸರಪಣಿಗಳನ್ನು ಮುರಿದು, ಭಯಾನಕ ಸ್ವರಗಳಲ್ಲಿ ಕೂಗುತ್ತಿದ್ದನು ಮತ್ತು ಚೂಪಾದ ಕಲ್ಲುಗಳಿಂದ ತನ್ನ ದೇಹವನ್ನು ಕ್ಯೂಯ್ದುಕೊಳ್ಳುತ್ತಿದ್ದನು. ಅವರ ಧ್ವನಿಗಳಲ್ಲಿದ್ದ ಸಂಕಟವು ಅವರ ಆತ್ಮಗಳಲ್ಲಿದ್ದ ಆಳವಾದ ಸಂಕಟವನ್ನು ಮಾತ್ರ ಪ್ರತಿಬಿಂಬಿಸುತ್ತದೆ (ಮತ್ತಾಯ 8:28,20; ಮಾರ್ಕ 5:1–5).

ಅದಾದ ನಂತರ, ಅವರು ಯೇಸುವನ್ನು ಭೇಟಿಯಾದರು, ಅವರ ಜೀವನವು ಬದಲಾಯಿತು. ಅವರು ಒಂದೇ ರೀತಿಯಾಗಿ ಉಳಿದುಕೊಳ್ಳಲಿಲ್ಲ. ಯೇಸು ಅವರ ದೇಹಗಳಲ್ಲಿ ಪೀಡಿಸುತ್ತಿದ್ದ ದೆವ್ವಗಳನ್ನು ಹಂದಿಗಳ ಹಿಂಡಿಗೆ ಹೊರಡಿಸಿದನು ಮತ್ತು ಅವು ಬಂಡೆಯ ಮೇಲಿಂದ ಸಮುದ್ರದೊಳಗೆ ಬಿದ್ದವು (ಮತ್ತಾಯ 8:32–34; ಮಾರ್ಕ 5:13,14).

ಮತ್ತಾಯ 8:28–34 ಓದಿರಿ. ಈ ಮನುಷ್ಯರಿಗೆ ಏನಾಯಿತು ಮತ್ತು ಏನಾಯಿತೆಂದು ನೋಡಲು ಪಟ್ಟಣವಾಸಿಗಳು ಹೊರಗೆ ಬಂದಾಗ, ಅವರು ಏನನ್ನು ಕಂಡುಕೊಂಡರು?

ದೆವ್ವ ಹಿಡಿದಿದ್ದ ವ್ಯಕ್ತಿಗಳು ಈಗ ಕ್ರಿಸ್ತನ ಶಕ್ತಿಯಿಂದ ಪರಿವರ್ತನೆಗೊಂಡ ಹೊಸ ಮನುಷ್ಯರಾಗಿದ್ದರು. ಯೇಸುವಿನ ಪಾದದ ಬಳಿಯಲ್ಲಿ ಕುಳಿತು ಗುರುವಿನ ಬಾಯಿಂದ ಹೊರಟಿದ್ದ ಪ್ರತಿಯೊಂದು ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದರು.

ಇದನ್ನು ಪಟ್ಟಣದ ಜನರು ಕಂಡುಕೊಂಡರು. ದೆವ್ವ ಹಿಡಿದಿದ್ದ ಇಬ್ಬರು ವ್ಯಕ್ತಿಗಳು ವಿಮೋಚಿಸಲ್ಪಟ್ಟರು ಎಂದು ಮತ್ತಾಯನ ಸುವಾರ್ತೆಯ ಹೇಳುತ್ತದೆ, ಅದೇ ಸಮಯದಲ್ಲಿ, ಮಾರ್ಕನ ಸುವಾರ್ತೆಯು ಇಬ್ಬರಲ್ಲಿ ಒಬ್ಬನ ಕಥೆಯನ್ನು ಮಾತ್ರ ಕೇಂದ್ರಿಸುತ್ತಿದೆ ಎಂಬುದನ್ನು ನಾವು ಗಮನಿಸಬೇಕು. ಆದರೆ ವಿಷಯವೇನೆಂದರೆ, ಯೇಸು ಅವರನ್ನು ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಮತ್ತು ಆಧ್ಯಾತ್ಮಿಕವಾಗಿ ಪುನಸ್ಥಾಪಿಸಿದನು.

ಮಾರ್ಕ 5:18–20 ಓದಿರಿ. ನಿಸ್ಸಂಶಯವಾಗಿ, ಬದಲಾವಣೆ ಹೊಂದಿದ ದೆವ್ವ ಹಿಡಿದಿದ್ದವನು, ಈ ಹೊಸ ಮಾನಸಾಂತರ ಹೊಂದಿದ ವ್ಯಕ್ತಿಯು ಯೇಸುವಿನ ಜೊತೆಗೆ ಇರಲು ಬಯಸಿದನು, ಆದರೆ ಕ್ರಿಸ್ತನು ಅವನನ್ನು ಏನು ಮಾಡಲು ಕಳುಹಿಸಿದನು?

"ಕೆಲವೇ ಕ್ಷಣಗಳು ಮಾತ್ರ ಈ ಮನುಷ್ಯರು ಕ್ರಿಸ್ತನ ಬೋಧನೆಗಳನ್ನು ಕೇಳಿಸಿಕೊಳ್ಳುವ ಭಾಗ್ಯವನ್ನು ಹೊಂದಿದ್ದರು. ಆತನ ಬಾಯಿಂದ ಹೊರಟ ಒಂದು ಸಂದೇಶವಾದರೂ ಅವರ ಕಿವಿಗೆ ಬಿದ್ದಿರಲಿಲ್ಲ. ಪ್ರತಿದಿನ ಕ್ರಿಸ್ತನ ಸಂಗಡವಿದ್ದ ಶಿಷ್ಯರಂತೆ ಜನರಿಗೆ ಸಲಹೆ ನೀಡಲು ಅವರಿಗೆ ಸಾಧ್ಯವಾಗಲಿಲ್ಲ. ಆದರೆ ಅವರು ತಮ್ಮ ಸ್ವಂತ ವ್ಯಕ್ತಿತ್ವಗಳಲ್ಲಿ ಯೇಸುವೇ ಮೆಸ್ಸೀಯನೆಂಬುದಕ್ಕೆ ಸಾಕ್ಷ್ಯಾಧಾರಗಳನ್ನು ಕೊಟ್ಟರು. ಅವರು ಸ್ವತಃ ಕಂಡದ್ದನ್ನು, ಕೇಳಿಸಿಕೊಂಡಿದ್ದನು, ಮತ್ತು ಕ್ರಿಸ್ತನ ಶಕ್ತಿಯನ್ನು ಅನುಭವಿಸಿದ್ದರ ಕುರಿತು ಅವರಿಗೆ ತಿಳಿದಿದ್ದನ್ನು ಅವರು ಹೇಳಬಲ್ಲರು. ದೇವರ ಕೃಪೆಯಿಂದ ಸ್ಪರ್ಶಿಸಲ್ಪಟ್ಟ ಪ್ರತಿಯೊಂದು ಹೃದಯಗಳು ಇದನ್ನು ಮಾಡಬಹುದು"– ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಏಜಸ್, ಪುಟ 340. ಅವರ ಸಾಕ್ಷಿಗಳು ಡೆಕಪೊಲಿಸ್‌ನ ಗಲಿಲಾಯದ ಸಮುದ್ರ ತೀರದ ಮೇಲೆ ಹತ್ತು ನಗರಗಳಿಗೆ ಯೇಸುವಿನ ಬೋಧನೆಗಳನ್ನು ಸ್ವೀಕರಿಸುವುದಕ್ಕೆ ಸಿದ್ಧಪಡಿಸಲಾಯಿತು.

**ಬುಧವಾರ** **ಸೆಪ್ಟೆಂಬರ್ 9**

## ಭರವಸೆಯೊಂದಿಗೆ ಸಾಕ್ಷಿ ಹೇಳುವುದು

1 ಯೋಹಾನ 5:11–13; ಇಬ್ರಿಯ 10:19–22; ಮತ್ತು 1 ಕೊರಿಂಥ 15:1,2 ಓದಿರಿ. ಕ್ರಿಸ್ತನಲ್ಲಿ ನಮ್ಮ ರಕ್ಷಣೆಯನ್ನು ಖಚಿತವಾಗಿ ಸಾಕ್ಷಿ ಹೇಳುವುದಕ್ಕೆ

ಅನುವು ಮಾಡಿಕೊಡುವ ಧರ್ಮಗ್ರಂಥಗಳು ನಮಗೆ ಯಾವ ನಿತ್ಯ ಜೀವದ ಭರವಸೆಯನ್ನು ನೀಡುತ್ತದೆ?

ಕ್ರಿಸ್ತನಲ್ಲಿರುವ ರಕ್ಷಣೆಯ ವೈಯಕ್ತಿಕ ಭರವಸೆಯು ನಮ್ಮಲ್ಲಿ ಇಲ್ಲದಿದ್ದರೆ, ಅದನ್ನು ಬೇರೊಬ್ಬರೊಂದಿಗೆ ಹಂಚಿಕೊಳ್ಳಲು ಸಾಧ್ಯವಿಲ್ಲ. ಸ್ವತಃ ನಮ್ಮಲ್ಲಿ ಇಲ್ಲದಿರುವುದನ್ನು ನಾವು ಹಂಚಿಕೊಳ್ಳಲು ಸಾಧ್ಯವಿಲ್ಲ. ಶಾಶ್ವತ ಅನಿಶ್ಚಿತತೆಯ ಸ್ಥಿತಿಯಲ್ಲಿ ಜೀವಿಸುತ್ತಿರುವ ಪ್ರಾಮಾಣಿಕ ಕ್ರೈಸ್ತರು, ತಾವು ಎಂದೆಂದಿಗೂ ರಕ್ಷಿಸಲ್ಪಡುವಷ್ಟು ಒಳ್ಳೆಯತನ ನಮ್ಮಲ್ಲಿ ಇದೆಯೇ ಎಂದು ಆಶ್ಚರ್ಯಪಡುತ್ತಾರೆ. ಬುದ್ಧಿವಂತ, ನುರಿತ ಬೋಧಕರು ಒಮ್ಮೆ ಹೇಳಿದಂತೆ, "ನಾನು ನನ್ನನ್ನು ನೋಡಿಕೊಳ್ಳುವಾಗ, ನಾನು ರಕ್ಷಿಸಲ್ಪಡುವ ಯಾವ ಸಾಧ್ಯತೆಯನ್ನು ಕಾಣಲಿಲ್ಲ. ನಾನು ಯೇಸುವನ್ನು ನೋಡಿದಾಗ, ನಾನು ಕಳೆದುಹೋಗುವ ಯಾವ ಸಾಧ್ಯತೆಯನ್ನು ಕಾಣಲಿಲ್ಲ". ಕರ್ತನ ಮಾತುಗಳು ಯುಗಯುಗಗಳಲ್ಲಿಯೂ ನಿಶ್ಚಿತವಾಗಿ ಮೊಳಗುತ್ತದೆ, "ಎಲ್ಲಾ ದಿಗಂತಗಳವರೇ ನನ್ನ ಕಡೆಗೆ ತಿರುಗಿಕೊಳ್ಳಿರಿ, ರಕ್ಷಣೆಯನ್ನು ಹೊಂದಿಕೊಳ್ಳಿರಿ; ನಾನೇ ದೇವರು, ಇನ್ನೂ ಯಾರು ಇಲ್ಲ" (ಯೆಶಾಯ 45:22).

ಆತನು ಉಚಿತವಾಗಿ ನೀಡುವ ರಕ್ಷಣೆಯಲ್ಲಿ ನಾವೆಲ್ಲರು ಸಂತೋಷಪಡಬೇಕೆಂದು ನಮ್ಮ ಕರ್ತನು ಬಯಸುತ್ತಾನೆ. ಆತನ ಕೃಪೆಯಿಂದ ನೀತಿವಂತರಾದೆವು ಮತ್ತು ಮುಕ್ತರಾದೆವು ಎಂಬುದರ ಅರ್ಥವೇನೆಂದು ನಾವು ಅನುಭವಿಸಲು ಆತನು ಹಾತೊರೆಯುತ್ತಾನೆ. ರೋಮಾಪುರದವರಿಗೆ 5ರಲ್ಲಿ ಪೌಲನು ಹೇಳಿದಂತೆ, "ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ" (ರೋಮಾ 5:1). "ಆದುದರಿಂದ ಕ್ರಿಸ್ತಯೇಸುವಿನಲ್ಲಿ ಇರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ" (ರೋಮಾ 8:1) ಎಂಬ ಭರವಸೆಯನ್ನು ನಾವು ಹೊಂದಬಹುದು ಎಂದು ಅವನು ಸೇರಿಸುತ್ತಾನೆ. ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ

ಜೀವವಿಲ್ಲ" (1 ಯೋಹಾನ 5:12) ಎಂದು ಅಪೋಸ್ತಲನಾದ ಯೋಹಾನನು ದೃಢಪಡಿಸುತ್ತಾನೆ.

ನಂಬಿಕೆಯಿಂದ ಯೇಸುವನ್ನು ನಾವು ಅಂಗೀಕರಿಸಿದರೆ ಮತ್ತು ಆತನು ತನ್ನ ಪವಿತ್ರಾತ್ಮನ ಮೂಲಕ ನಮ್ಮ ಹೃದಯಗಳಲ್ಲಿ ವಾಸಿಸಿದರೆ, ನಿತ್ಯಜೀವದ ಉಡುಗೊರೆಯು ಇಂದು ನಮ್ಮದಾಗುತ್ತದೆ. ಒಂದು ಸಾರಿ ನಾವು ದೇವರಕೃಪೆ ಮತ್ತು ಕ್ರಿಸ್ತನಲ್ಲಿನ ರಕ್ಷಣೆಯನ್ನು ಅನುಭವಿಸಿದರೆ, ನಾವು ಅದನ್ನು ಎಂದಿಗೂ ಕಳೆದುಕೊಳ್ಳುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ (2 ಪೇತ್ರ 2:18–22; ಇಬ್ರಿಯ 3:6; ಪ್ರಕಟನೆ 3:5). ಆತನಿಂದ ದೂರಹೋಗಲು ನಮಗೆ ಮುಕ್ತ ಆಯ್ಕೆ ಇದೆ, ಆದರೆ ಒಮ್ಮೆ ನಾವು ಆತನ ಪ್ರೀತಿಯನ್ನು ಮತ್ತು ಆತನ ತ್ಯಾಗದ ಆಳವನ್ನು ಅರ್ಥ ಮಾಡಿಕೊಂಡ ನಂತರ ನಮ್ಮನ್ನು ತುಂಬಾ ಪ್ರೀತಿಸುವ ಒಬ್ಬನಿಂದ ದೂರಹೋಗುವುದನ್ನು ನಾವು ಎಂದಿಗೂ ಆರಿಸಿಕೊಳ್ಳಬಾರದು. ನಮಗೆ ಯೇಸುವಿನಲ್ಲಿ ಕೊಡಲ್ಪಟ್ಟ ಕೃಪೆಯನ್ನು ಇತರರೊಂದಿಗೆ ಹಂಚಿಕೊಳ್ಳುವ ಅವಕಾಶಗಳನ್ನು ನಾವು ಎದುರು ನೋಡುತ್ತಿದ್ದೇವೆ.

ಯೇಸುವಿನಲ್ಲಿ ರಕ್ಷಣೆಯ ಭರವಸೆಯು ನಿಮಗೆ ಇದೆಯೇ? ಹಾಗಾದರೆ, ನೀವು ಅದನ್ನು ಯಾವುದರ ಮೇಲೆ ಆಧಾರಿಸುತ್ತೀರಿ? ಆ ಭರವಸೆಯನ್ನು ನೀವು ಯಾಕೇ ಹೊಂದಿದ್ದೀರಿ? ಅದು ಎಲ್ಲಿ ದೊರಕುವುದು? ಮತ್ತೊಂದೆಡೆ, ನಿಮಗೆ ಖಚಿತವಿಲ್ಲದಿದ್ದರೆ, ನಿಮಗೆ ಯಾಕೆ ಖಚಿತವಿಲ್ಲ? ಆ ಭರವಸೆಯನ್ನು ನೀವು ಹೇಗೆ ಕಂಡುಹಿಡಿಯಬಹುದು?

**ಗುರುವಾರ** **ಸೆಪ್ಟೆಂಬರ್ 10**

## ಸಾಕ್ಷಿ ಹೇಳಲು ಯೋಗ್ಯವಾದ ವಿಷಯ

"ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ. ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವುದು ಹೇಗೆಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು" (ಗಲಾತ್ಯ 2:20).

ನಾವು ಕ್ರಿಸ್ತನನ್ನು ಅಂಗೀಕರಿಸುವಾಗ ಖಂಡಿತವಾಗಿಯೂ ತ್ಯಾಗಗಳು ಉಂಟು. ಕೆಲವು ವಿಷಯಗಳನ್ನು ಒಪ್ಪಿಸಿಕೊಡಲು ಆತನು ನಮಗೆ ಕೇಳುತ್ತಾನೆ. ಯೇಸುವನ್ನು ಹಿಂಬಾಲಿಸುವುದಕ್ಕೆ ತೆಗೆದುಕೊಳ್ಳುವ ಬದ್ಧತೆಯನ್ನು ಆತನೇ ಸರಳಗೊಳಿಸಿದನು. "ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲೂ ಹೊತ್ತುಕೊಂಡು ನನ್ನ ಹಿಂದೆ ಬರಲಿ" (ಲೂಕ 9:23). ಕೂಜ್ರೆಯ ಮೇಲಣ ಮರಣವು ನೋವಿನಿಂದ ಕೂಡಿದ ಮರಣವಾಗಿದೆ. ಕ್ರಿಸ್ತನ ವಶದಲ್ಲಿರುವುದಕ್ಕೆ ನಮ್ಮ ಜೀವನಗಳನ್ನು ಒಪ್ಪಿಸಿಕೊಟ್ಟಾಗ, ಪಾಪದಲ್ಲಿರುವ ಈ ಹಳೆಯ ಮನುಷ್ಯರನ್ನು ಶಿಲುಬೆಗೇರಿಸಲಾಗುವುದು (ರೋಮಾ 6:6 ನೋಡಿ), ಅದು ನೋವಿನಿಂದ ಕೂಡಿದೆ. ಹೃದಯದಲ್ಲಿಟ್ಟುಕೊಂಡ ಆಸೆಗಳು ಮತ್ತು ಜೀವಿತಾವಧಿ ಹವ್ಯಾಸಗಳನ್ನು ಬಿಟ್ಟುಬಿಡುವುದಕ್ಕೆ ಕೆಲವು ಸಮಯದಲ್ಲಿ ನೋವಿನಿಂದ ಕೂಡಿದೆ, ಆದರೆ ಪ್ರತಿಫಲಗಳು ನೋವನ್ನು ಮೀರಿಸುತ್ತದೆ.

ಇತರರ ಮೇಲೆ ಜೀವನವನ್ನು ಬದಲಾಯಿಸುವ ಪ್ರಭಾವಶಾಲಿ ಸಾಕ್ಷಿಗಳು ಕ್ರಿಸ್ತನು ಏನು ಮಾಡಿದ್ದಾನೆ ಎಂಬುದರ ಮೇಲೆ ಕೇಂದ್ರೀಕರಿಸುತ್ತದೆ. ಆದರೆ ನಾವು ಆತನಿಗಾಗಿ ಏನು ಬಿಟ್ಟುಕೊಟ್ಟಿದ್ದೇವೆ ಎಂಬುದರಲ್ಲಿ ಅಲ್ಲ. ಅವು ಆತನ ತ್ಯಾಗಗಳ ಮೇಲೆ ಕೇಂದ್ರೀಕರಿಸಿದೆ, ಆದರೆ ನಮ್ಮ 'ತ್ಯಾಗಗಳ' ಮೇಲೆ ಅಲ್ಲ. ಯಾಕೆಂದರೆ ಕ್ರಿಸ್ತನು ನಮ್ಮನ್ನು ಏನನ್ನೂ ಬಿಟ್ಟುಕೊಡಲು ಕೇಳುವುದಿಲ್ಲ. ಅದನ್ನು ಹಿಡಿದಿಟ್ಟುಕೊಳ್ಳುವುದು ನಮ್ಮ ಉತ್ತಮ ಆಸಕ್ತಿಯಾಗಿದೆ.

ಆದರೂ, ಕ್ರೈಸ್ತಧರ್ಮದ ಇತಿಹಾಸವು ಕ್ರಿಸ್ತನ ಸಲುವಾಗಿ ಮಹತ್ತರವಾದ ತ್ಯಾಗಗಳನ್ನು ಮಾಡಿದವರ ಕಥೆಗಳಿಂದ ತುಂಬಿದೆ. ಈ ಜನರು ರಕ್ಷಣೆಯನ್ನು ಗಳಿಸುತ್ತಾರೆ ಅಥವಾ ಅವರ ಕಾರ್ಯಗಳು ಎಷ್ಟೇ ನಿಸ್ವಾರ್ಥ ಮತ್ತು ತ್ಯಾಗಮಯವಾಗಿದ್ದರೂ ಪರವಾಗಿಲ್ಲ, ದೇವರ ಮುಂದೆ ಅವುಗಳು ಅರ್ಹತೆಯನ್ನು ಕೊಡುತ್ತದೆ ಎಂಬ ಅರ್ಥವಲ್ಲ. ಬದಲಾಗಿ, ಹೆಚ್ಚಿನ ಸಂದರ್ಭಗಳಲ್ಲಿ, ಕ್ರಿಸ್ತನು ತಮಗಾಗಿ ಏನು ಮಾಡಿದ್ದಾನೆಂದು ಅರಿತುಕೊಂಡು, ಈ ಸ್ತ್ರೀಯರು ಮತ್ತು ಪುರುಷರು ತಮ್ಮ ಜೀವನದಲ್ಲಿ ದೇವರ ಕರೆಯ ಪ್ರಕಾರ ತ್ಯಾಗ ಬಲಿಪೀಠದ ಮೇಲೆ ಇಡಲು ಸಿದ್ಧರಿದ್ದರು.

ಯೋಹಾನ 1:12; ಯೋಹಾನ 10:10; ಯೋಹಾನ 14:27; ಮತ್ತು 1 ಕೊರಿಂಥ 1:30 ಓದಿರಿ. ನಮ್ಮ ಸಾಕ್ಷಿಯೂ ಯಾವಾಗಲೂ ಕ್ರಿಸ್ತನು ನಮಗಾಗಿ ಏನು ಮಾಡಿದ್ದಾನೆ ಎಂಬುದರ ಮೇಲೆ ಆಧಾರಿತವಾಗಿದೆ. ಮೇಲಿನ ವಚನಗಳಲ್ಲಿ ಉಲ್ಲೇಖಿಸಲಾದ ಆತನ ಕೃಪೆಯ ಉಡುಗೊರೆಗಳನ್ನು ಪಟ್ಟಿ ಮಾಡಿ.

ಮೇಲಿನ ವಾಕ್ಯಗಳ ಬೆಳಕಿನಲ್ಲಿ, ಕ್ರಿಸ್ತನು ನಿಮಗಾಗಿ ಏನು ಮಾಡಿದ್ದಾನೆಂದು ಆಲೋಚಿಸಿ. ನಿಮ್ಮ ಜೀವನದುದ್ದಕ್ಕೂ ನೀವು ಪ್ರತಿಷ್ಠಿಸಲ್ಪಟ್ಟ ಕ್ರೈಸ್ತರಾಗಿರಬಹುದು ಅಥವಾ ನೀವು ಹೆಚ್ಚು ಅನಿರೀಕ್ಷಿತವಾದ ಮಾನಸಾಂತರವನ್ನು ಬಹುಶಃ ಅನುಭವಿಸಿರಬಹುದು. ಯೇಸು ನಿಮಗೆ ನೀಡಿರುವ ಉದ್ದೇಶ, ಶಾಂತಿ ಮತ್ತು ಸಂತೋಷ ಬಗ್ಗೆ ಆಲೋಚಿಸಿ, ಆತನು ಎಷ್ಟು ಉತ್ತಮನೆಂದು ಧ್ಯಾನಿಸಿ. ನಿಮ್ಮ ಜೀವನದ ಕಷ್ಟದ ಅನುಭವಗಳನ್ನು ಹಾದುಹೋಗಲು ಆತನು ನಿಮಗೆ ಬಲವನ್ನು ಕೊಟ್ಟಿರುವ ಸಮಯದ ಬಗ್ಗೆ ಆಲೋಚಿಸಿ.

ಕ್ರಿಸ್ತನ ಸಲುವಾಗಿ ಯಾವ ರೀತಿಯ ತ್ಯಾಗಗಳನ್ನು ಮಾಡಲು ನಿಮ್ಮನ್ನು ಕರೆಯಲಾಗಿದೆ? ಇತರರಿಗೆ ಆಶೀರ್ವಾದವಾಗಬಹುದಾದ ನಿಮ್ಮ ಅನುಭವಗಳಿಂದ ನೀವೇನು ಕಲಿತಿದ್ದೀರಿ?

**ಶುಕ್ರವಾರ ಸೆಪ್ಟೆಂಬರ್ 11**

**ಹೆಚ್ಚಿನ ಚಿಂತನೆ :** ಮಾರ್ಕ 5:25–34 ಓದಿರಿ. ಸುತ್ತುವರೆದ ಗುಂಪು ಯೇಸುವನ್ನು ನೂಕಿಕೊಂಡು ಹೋಗುವಾಗ ಯಾವುದೇ ಜೀವಧಾರಕ ಶಕ್ತಿಯು ಹೊರಟಿದ್ದನ್ನು ಗ್ರಹಿಸಲಿಲ್ಲ. ಆದರೆ ರೋಗದಿಂದ ಬಳಲುತ್ತಿದ್ದ ಸ್ತ್ರೀಯು ತಾನು ಸ್ವಸ್ಥಳಾಗುತ್ತೇನೆಂಬ ನಂಬಿಕೆಯಿಂದ ಆತನನ್ನು ಮುಟ್ಟಲು ತನ್ನ ಕೈಗಳನ್ನು ಚಾಚಿದಾಗ, ಅವಳು ಗುಣಪಡಿಸುವ ಶಕ್ತಿಯನ್ನು ಅನುಭವಿಸಿದಳು. ಆದ್ದರಿಂದ ಆಧ್ಯಾತ್ಮಿಕ ವಿಚಾರಗಳಲ್ಲಿ, ಆಕಸ್ಮಿಕವಾಗಿ ಧರ್ಮದ ಬಗ್ಗೆ ಮಾತನಾಡುವುದು, ಆತ್ಮದಾಹವಿಲ್ಲದೆ ಮತ್ತು ಜೀವಿಸುವ ನಂಬಿಕೆಯಿಲ್ಲದೆ ಪ್ರಾರ್ಥಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಕ್ರಿಸ್ತನ ಮೇಲೆ ಇಟ್ಟಿರುವ ನಾಮಕವಸ್ಥೆ ನಂಬಿಕೆಯು, ಕೇವಲ ಆತನನ್ನು ಜಗತ್ತಿನ ರಕ್ಷಕನೆಂದು ಅಂಗೀಕರಿಸುತ್ತದೆ. ಆದರೆ ಆತ್ಮಕ್ಕೆ ಎಂದಿಗೂ ಸ್ವಸ್ಥತೆಯನ್ನು ತರಲಾರದು. ರಕ್ಷಣೆಯ ಮೇಲಿರುವ ನಂಬಿಕೆಯು,

ಸತ್ಯಕ್ಕೆ ಬುದ್ಧಿವಂತಿಕೆಯ ಸಮ್ಮತಿಯಲ್ಲ... ಕ್ರಿಸ್ತನ ಕುರಿತು ನಂಬುವುದಕ್ಕೆ ಇಷ್ಟು ಮಾತ್ರ ಸಾಕಾಗುವುದಿಲ್ಲ; ನಾವು ಆತನ ಮೇಲೆ ನಂಬಿಕೆಯನ್ನು ಇಡಲೇಬೇಕು. ನಮಗೆ ಉಪಯುಕ್ತವಾಗುವ ಏಕೈಕ ನಂಬಿಕೆಯೆಂದರೆ, ಆತನನ್ನು ಸ್ವಂತ ರಕ್ಷಕನೆಂದು ಒಪ್ಪಿಕೊಳ್ಳುವುದು; ಅದು ಆತನ ಯೋಗ್ಯತೆಯನ್ನು ನಮಗೆ ಸ್ವಾಧೀನ ಪಡಿಸುತ್ತದೆ.

ಆತನ ನಂಬಿಗಸ್ತಿಕೆಯ ನಮ್ಮ ಪಾಪನಿವೇದನೆಯು, ಲೋಕಕ್ಕೆ ಕ್ರಿಸ್ತನನ್ನು ಪ್ರಚುರಪಡಿಸುವ ಪರಲೋಕದ ಆರಿಸಲ್ಪಟ್ಟ ಪ್ರತಿನಿಧಿಯಾಗುತ್ತದೆ. ನಾವು ಆತನ ಕೃಪೆಯನ್ನು ಅನುಭವಿ ಪರಿಶುದ್ಧ ಮನುಷ್ಯರ ಮೂಲಕ ತಿಳಿದುಕೊಂಡೆವು ಎಂದು ಒಪ್ಪಿಕೊಳ್ಳುತ್ತೇವೆ; ಆದರೆ ಹೆಚ್ಚು ಪರಿಣಾಮಕಾರಿಯಾಗಿರುವುದು ನಮ್ಮ ಸ್ವಂತ ಅನುಭವದ ಸಾಕ್ಷಿ. ನಮ್ಮಲ್ಲಿ ಕೆಲಸ ಮಾಡುತ್ತಿರುವ ಶಕ್ತಿಯು ದೈವೀಕವಾದದ್ದೆಂದು ನಾವು ಪ್ರಚುರಪಡಿಸಿದಾಗ, ನಾವು ದೇವರಿಗಾಗಿ ಸಾಕ್ಷಿಗಳಾಗುತ್ತೇವೆ. ಪ್ರತಿಯೊಬ್ಬ ವ್ಯಕ್ತಿಯು ಎಲ್ಲರಿಗಿಂತ ವಿಭಿನ್ನವಾದ ಜೀವನವನ್ನು ಹೊಂದಿರುತ್ತಾನೆ, ಮತ್ತು ವಿಶಿಷ್ಟವಾದ ಅನುಭವವನ್ನು ಅಗತ್ಯವಾಗಿ ಹೊಂದಿರುತ್ತಾನೆ. ನಾವು ಮಾಡುವ ಸ್ತುತಿಯು ಆತನ ಬಳಿಗೆ ಏರಿಹೋಗಬೇಕೆಂದು ದೇವರು ಬಯಸುತ್ತಾನೆ, ಅದು ನಮ್ಮ ಸ್ವಂತ ವೈಯಕ್ತಿಕ ಗುಣದಿಂದ ಗುರುತಿಸಲ್ಪಡುತ್ತದೆ. ಆತನ ಕೃಪೆಯ ಮಹಿಮೆಯ ಸ್ತುತಿಗೆ, ಈ ಅಮೂಲ್ಯವಾದ ಸ್ವೀಕೃತಿಗಳು, ಕ್ರಿಸ್ತನ ರೀತಿಯ ಜೀವನದಿಂದ ಸಮರ್ಥಿಸಲ್ಪಟ್ಟಾಗ, ಆತ್ಮಗಳ ರಕ್ಷಣೆಗಾಗಿ ತಡೆಹಿಡಿಯಲಾಗದ ಒಂದು ಶಕ್ತಿ ಕೆಲಸ ಮಾಡುತ್ತದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಒತ್ತಾಯಪಡಿಸುವ ಸಾಕ್ಷಿಯ ಅಂಶಗಳು ಯಾವುವು? ಅಪೊಸ್ತಲರ ಕೃತ್ಯಗಳು 26:1–23ರಲ್ಲಿ ಅಗ್ರಿಪ್ಪನ ಮುಂದೆ ಪೌಲನ ಸಾಕ್ಷಿಯನ್ನು ಓದಿರಿ. ಅವನ ಸಾಕ್ಷಿಯ ಆಧಾರ ಯಾವುದು?

2. ಕ್ರಿಸ್ತನು ನಮಗಾಗಿ ಏನು ಮಾಡಿದ್ದಾನೆ ಎಂಬುದಕ್ಕೆ ನಮ್ಮ ವೈಯಕ್ತಿಕ ಸಾಕ್ಷಿಯು ತುಂಬಾ ಶಕ್ತಿಯುತವಾಗಿದೆ ಎಂದು ನೀವು ಏಕೆ ಆಲೋಚಿಸುತ್ತೀರಿ? ಹೇಗೆ, ಹೇಗಾದರೂ ಎಂಬ ಪ್ರಶ್ನೆಗೆ ನೀವು

ಉತ್ತರಿಸುತ್ತೀರಾ : ಸರಿ, ಅದೇ ತಾನೇ ನಿಮಗೆ ಸಂಭವಿಸಿತು, ಆದರೆ ನನಗೆ ಆ ರೀತಿಯ ಅನುಭವವಿಲ್ಲದಿದ್ದರೆ ಏನು ಮಾಡುವುದು? ನಾನು ಯಾಕೆ ಕ್ರಿಸ್ತನನ್ನು ಹಿಂಬಾಲಿಸಬೇಕು ಎಂಬುದರ ಕುರಿತು ನಿಮ್ಮ ಅನುಭವವು ನನಗೆ ಯಾವುದನ್ನಾದರೂ ಕಲಿಸಲು ಏಕೆ ಸಾಧ್ಯವಾಗಬೇಕು?

3. ಅವಿಶ್ವಾಸಿಗಳಿಗೆ ನಿಮ್ಮ ಸಾಕ್ಷಿಯನ್ನು ಹೇಳುವಾಗ ನೀವು ದೂರವಿರಿಸಲು ಬಯಸುವ ಕೆಲವು ವಿಷಯಗಳು ಯಾವುವು?

4. ರಕ್ಷಣೆಯ ಭರವಸೆ ಕುರಿತ ಪ್ರಶ್ನೆಯ ಮೇಲೆ ಪೂರ್ಣಗಮನವಿಡಿ. ಇದು ಏಕೆ ಕ್ರೈಸ್ತರ ಅನುಭವದ ಪ್ರಮುಖ ಭಾಗವಾಗಿದೆ? ಅದೇ ಸಮಯದಲ್ಲಿ, ಮಿತಿ ಮೀರಿದ ಭರವಸೆಯುಳ್ಳವರಾಗಿರದೆ, ನಮ್ಮ ಸ್ವಂತ ರಕ್ಷಣೆಯ ಬಗ್ಗೆ ನಾವು ಹೇಗೆ ಭರವಸೆಯಿಡಬಹುದು?